ರೇಷ್ಮೆ ಮಾರಾಟ ಕೇಂದ್ರ ಮತ್ತು ರೇಷ್ಮೆ ತಯಾರಿಕಾ ಕೇಂದ್ರ ಸ್ಥಾಪಿಸುವ ಬಗ್ಗೆ.

೨೪೭೨ ಶ್ರೀ ಎಸ್. ಸಂಜಪ್ಪ, (ಕೃಷ್ಣರಾಜನಗರ).—ಪಾನ್ಯ ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ಗುಂಡ್ಲುಪೇಟೆ, ಮೈಸೂರು, ಚೆನ್ನಪಟ್ಟಣ ಮತ್ತು ಬೆಂಗಳೂರು ಈ ಜಿಲ್ಲಾ ರಿಂದ ಪೂರ್ವ ಭಾಗದ ಕರ್ನಾಟಕ ಪ್ರದೇಶಗಳಲ್ಲಿ ರೇಷ್ಮೆ ಅಭಿವೃದ್ಧಿಯಾಗಿದ್ದು ಇತ್ತೀಚಿನ ವರ್ಷಗಳಲ್ಲಿ ಈ ಹೆಜ್ಜಾರಿಯ ಪಶ್ಚಿಮ ಭಾಗದ ಪ್ರದೇಶಗಳು ಆದರಲ್ಲೂ ಹುಣಸೂರು, ಕೆ. ಆರ್. ನಗರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ರೇಷ್ಮೆ ಅಭಿವೃದ್ಧಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಈ ಭಾಗದ ರೇಷ್ಮೆ ಬೆಳೆಗಾರರು ರೇಷ್ಮೆಗೂಡು ಮಾಡಲು ಬಹಳ ದೂರದ ಸ್ಥಳಗಳಾದ ರಾಮನಗರ ಮತ್ತು ಕೊಳ್ಳೇಗಾಲಗಳಿಗೆ ಹೋಗುವುದು ಕಷ್ಟವಾಗುವುದಿಲ್ಲವೆ.

ಇ) ಹಾಗಿದ್ದಲ್ಲಿ ಅವರ ಅನುಕೂಲಕ್ಕಾಗಿ ಕೆ. ಆರ್. ನಗರ ಅಥವಾ ಅರಕಲಗೂಡು ತಾಲ್ಲೂಕುಗಳಲ್ಲಿ ಯಾವುದಾದರೂ ಸ್ಥಳಗಳಲ್ಲಿ ರೇಷ್ಮೆ ಮಾರಾಟ ಕೇಂದ್ರ ಮತ್ತು ರೇಷ್ಮೆ ತಯಾರಿಕಾ ಕೇಂದ್ರ ಸ್ಥಾಪನೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವರು).—

ಅ) ಹೌದು.

ಆ) ಈ ಪ್ರದೇಶಗಳಿಂದ ರಾಮನಗರ ಮತ್ತು ಕೊಳ್ಳೇಗಾಲಕ್ಕೆ ಹೋಗುವ ಸಾರ್ವಜನಿಕ ವಾಹನಗಳಿರುತ್ತವೆ. ರೇಷ್ಮೆ ಕಸುಬುದಾರರು ಈ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕ ಧಾರಣೆ ಸಿಕ್ಕುವ ನಿರೀಕ್ಷೆಯಿಂದ ರಾಮನಗರ ಮತ್ತು ಕೊಳ್ಳೇಗಾಲದ ಮಾರುಕಟ್ಟೆಗಳಿಗೆ ಗೂಡನ್ನು ತೆಗೆದುಕೊಂಡು ಹೋಗಲು ಇಚ್ಛಿಸುತ್ತಾರೆ.

ಇ) ಸಧ್ಯಕ್ಕೆ ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿ ಮತ್ತು ಹಾಸನದಲ್ಲಿ ಸಣ್ಣ ರೇಷ್ಮೆ ಗೂಡಿನ ವ್ಯವಹಾರ ಕೇಂದ್ರಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆಯಲ್ಲಿ ಹಾಸನ ಮತ್ತು ಹುಣಸೂರುಗಳಲ್ಲಿ ಮಾದರಿ ರೇಷ್ಮೆಗೂಡಿನ ಮಾರುಕಟ್ಟೆಗಳನ್ನು ಕಟ್ಟಲಾಗುತ್ತಿದೆ. ಈ ಯೋಜನೆಯಲ್ಲಿ ಈ ಉದ್ದಿಮೆದಾರರಿಗೆ ಈ ತಾಲ್ಲೂಕುಗಳಲ್ಲಿ ನೂಲುಬಿಚ್ಚುವ ಘಟಕಗಳನ್ನು ಸ್ಥಾಪಿಸಲು ಸಾಲವನ್ನು ಸಹ ಮುಂಜೂರು ಮಾಡಲಾಗುತ್ತಿದೆ. ಸಧ್ಯಕ್ಕೆ ಅರಕಲಗೂಡು ಮತ್ತು ಕೆ. ಆರ್. ನಗರ ತಾಲ್ಲೂಕುಗಳಲ್ಲಿ ಸರ್ಕಾರಿ ರೇಷ್ಮೆ ತಯಾರಿಕಾ ಕೇಂದ್ರ ಸ್ಥಾಪಿಸುವ ಯೋಜನೆ ಇಲ್ಲ.

ಶ್ರೀ ಎಸ್. ಸಂಜಪ್ಪ.....ಸನ್ಮಾನ್ಯ ಅಧ್ಯಕ್ಷರೇ, ಸಣ್ಣಪುಟ್ಟ ರೇಷ್ಮೆ ಬೆಳೆಗಾರರು ರೇಷ್ಮೆ ಗೂಡುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡಲು ತುಂಬಾ ಕಷ್ಟವಾಗಿದೆ. ಕೃಷ್ಣರಾಜನಗರದಿಂದ ರಾಮನಗರಕ್ಕೆ ನೂರು ಮೈಲಿಯಾಗುತ್ತದೆ. ಕೊಳ್ಳೇಗಾಲಕ್ಕೆ ೭೦ ಮೈಲಿಯಾಗುತ್ತದೆ. ಆವರಿಗೆ ಸ್ಪರ್ಧಾತ್ಮಕ ಧಾರಣೆ ಸಿಗುತ್ತದೆ ಎಂದು ಪಾನ್ಯ ಮಂತ್ರಿಯವರು ಅಷ್ಟಣೆಕೊಡಿಸಿದ್ದಾರೆ. ಆದರೆ ಈ ಪ್ರಯಾಣದ ಖರ್ಚನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬೆಳೆಗಾರರಿಗೆ ನಷ್ಟವೇ ಆಗುತ್ತದೆ. ಆದ್ದರಿಂದ ಈ ಪ್ರದೇಶದಲ್ಲಿ ರೇಷ್ಮೆ ಮಾರಾಟ ಕೇಂದ್ರವನ್ನು ಪ್ರಾರಂಭ ಮಾಡುವ ಯೋಜನೆಯನ್ನು ಸರ್ಕಾರದವರು ಏನಾದರೂ ಇಟ್ಟುಕೊಂಡಿದ್ದಾರೆಯೇ ಎಂದು ನಾನು ತಮ್ಮ ಮೂಲಕ ಪಾನ್ಯ ಮಂತ್ರಿಯವರನ್ನು ಕೇಳಲು ಬಯಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸು.—ಇದು ಆಗತ್ಯವಿದ್ದಲ್ಲಿ ಸರ್ಕಾರ ಪರಿಶೀಲನೆ ಮಾಡುತ್ತದೆ, ಹೆಚ್ಚಿನ ರೇಷ್ಮೆ ಬೆಳೆಗೆ ಮತ್ತು ನೇಕಾರರಿಗೆ ಉತ್ತೇಜನ, ಇತರೆ ಸೌಕರ್ಯಗಳು ಸಿಗುವ ದೃಷ್ಟಿಯಿಂದ ಹೊಸದಾಗಿ ಈ ಸ್ಥಳಗಳಲ್ಲಿ ಮಾರಾಟ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಸಂಜಪ್ಪ.—ಈ ಪ್ರದೇಶಗಳಲ್ಲಿ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಮೊಟ್ಟೆ ಸರಬರಾಜು ಸರಿಯಾಗಿ ಆಗದೆ ತೊಂದರೆಯಾಗುತ್ತಿದೆ. ರೇಷ್ಮೆ ಮೊಟ್ಟೆಗಳನ್ನು ಸರಬರಾಜು ಮಾಡುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಚಂದ್ರಪ್ರಭಾ ಅರಸ್.—ಕೆಲವು ಪ್ರದೇಶಗಳನ್ನು ವಿಶ್ವಬ್ಯಾಂಕ್ ಯೋಜನೆಯ ಕೆಳಗೆ ಒಳಪಡಿಸಿದ್ದೇವೆ. ಅವರಿಗೆ ಸಾಕಷ್ಟು ಸೌಲಭ್ಯಗಳನ್ನು, ಧನಸಹಾಯ ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದಕ್ಕೋಸ್ಕರ ಸರ್ಕಾರ ವಿಶ್ವಬ್ಯಾಂಕ್‌ಗೆ ಸಂಬಂಧಪಟ್ಟ ಜನರು ಇಲ್ಲಿಗೆ ಬಂದಿದ್ದಾಗ ಇದನ್ನು ಅವರ ಗಮನಕ್ಕೆ ತಂದಿದ್ದೇವೆ. ಇನ್ನೂ ಹೆಚ್ಚಿನ ಪ್ರದೇಶಗಳನ್ನು ಈ ಯೋಜನೆಯಲ್ಲಿ ಒಳಪಡಿಸಿ ಅವರಿಗೂ ಕೂಡ ಈ ಸೌಲಭ್ಯ ಸಿಗುವ ಹಾಗೆ ಸೂಕ್ತ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ರಾಮಚಂದ್ರರಾವ್.—ಒಂದು ವರ್ಷದಲ್ಲಿ ಕೃಷಿ ಕಾರ್ಮಿಕರಿಗೆ ಎಷ್ಟು ದಿವಸ ಕೆಲಸ ಸಿಗುತ್ತದೆ ?

SRI AZEEZ SAIT.—I do not have that information with me.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಕೃಷಿ ಕಾರ್ಮಿಕರಿಗೆ ಎಷ್ಟೆಷ್ಟು ವೇತನ ಬರುತ್ತಿವೆ. ಕೃಷಿ ಕಾರ್ಮಿಕರಿಗೆ ಕೂಲಿ ಎಷ್ಟು ಕೊಡುತ್ತೀರಿ ? ತಾವು ಹಿಂದೆ ಇದೇ ಸದನದ ಸದಸ್ಯರಾಗಿ ಇದ್ದಾಗ ತಮಗೆ ಗೊತ್ತುಂಟು ನಾನು ಕೃಷಿ ಕಾರ್ಮಿಕರಿಗೆ ಒಂದು ಪ್ರೈವೇಟ್ ಬಿಲ್ ತೆಗೆದುಕೊಂಡು ಬಂದಿದ್ದೆ. ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿದ್ದರು, ಆಗ ಅವರು ಸರ್ಕಾರದವರೇ ಇಂತಹ ಶಾಸನ ತರುತ್ತೇವೆಂದು ಹೇಳಿದ್ದರು. ಕೇರಳ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿರುವಂತೆ ಕೃಷಿ ಕಾರ್ಮಿಕರ ಬಗ್ಗೆ ಒಂದು ಸಮಗ್ರವಾದ ಕಾನೂನನ್ನು ತರುವುದರ ಬಗ್ಗೆ ಆಶ್ವಾಸನೆ ಕೊಡುತ್ತೀರಾ ? ಮೇಲ್ಮನೆಗೆ ಚುನಾವಣೆ ನಡೆಯುತ್ತಿದೆ ಎಂದು ನಮಗೆ ಗೊತ್ತು. ಆದರೆ ಮಾನ್ಯ ಸದಸ್ಯರುಗಳು ಮಧ್ಯೆ ಪಾಧ್ಯೆ ಬಂದು ಮಂತ್ರಿಗಳಿಗೆ ತೊಂದರೆ ಕೊಡಬಾರದು. ನಾವು ಪಂಂತ್ರಿಗಳಿಂದ ಉತ್ತರ ನಿರೀಕ್ಷೆಯಲ್ಲಿರುತ್ತೇವೆ. ಸದಸ್ಯರುಗಳಂ ಮಧ್ಯೆ ಮಂತ್ರಿಗಳನ್ನು ಮಾತನಾಡಿಸುವುದು ಸರಿಯಲ್ಲ.

SRI AZEEZ SAIT.—I have no two opinion about bringing a welfare legislation. Of course that legislation is available in Andhra, Kerala West Bengal. Already I have instructed my office to get those Acts in order to find out whether there is anything suitable to us so that we can scrutinise all the three and take out the best of it and add something. I will try to bring a legislation as early as possible. Regarding the minimum wage, as you know, wages vary from Rs. 5 to Rs. 7.50 per day. But recently the High Court of Karnataka has struct it down. Wages now paid vary from 3.50 to 6.50 rupees. I assure you that in the light of the High Court judgement, we have formed Minimum Wages Advisory Committee. High Court has given some direction. If I act immediately, that means accepting the judgement. I am waiting for a reply form the Advocate General. Then I will see that the Minimum Wage Advisory Commiette is appointed and wages revised. Now, I assure you that I will place before this House a welfare measure for agriculture sector

ಶ್ರೀ ರಾಮಚಂದ್ರರಾವ್.—ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಒಂದು ವರ್ಷಕ್ಕೆ ಕೃಷಿ ಕಾರ್ಮಿಕರಿಗೆ ಎಷ್ಟು ದಿವಸ ಕೆಲಸ ಸಿಗುತ್ತದೆ That is a very important information I want

SRI AZEEZ SAIT.—I have already said that at the present moment' I have no information. I assure my hon. friend that information will be supplied to him afterwards.